


# ಕಾನನ

## ನಿಸರ್ಗದೆಡೆಗೆ ಪಯಣ

ಸೆಪ್ಟೆಂಬರ್ ೨೦೧೪

BANNERUGHATTA
WILDLIFE
CONSERVATION
GROUP

# ಕಾನನ


**ಸಂಪಾದಕೀಯ**

ಅಶ್ವಥ ಕೆ.ಎನ್

**ಲೇಖನ ವೃಂದ**

ಮಹದೇವ ಕೆ.ಸಿ

ಅಶ್ವಥ ಕೆ.ಎನ್

ಶಂಕರಪ್ಪ ಕೆ.ಪಿ

ಸುಬ್ಬು ಬಾದಲ್

ಕೃಷ್ಣನಾಯಕ್

**ಕರಡು ತಿದ್ದುಪಡಿ**

ಮುರಳಿ ಎಸ್

**ವಿನ್ಯಾಸ**

ಮಹದೇವ ಕೆ.ಸಿ

**ಛಾಯಾಚಿತ್ರ**

ಕಾರ್ತಿಕ್ ಎ.ಕೆ

**ಇ-ವಿಳಾಸ**

kaanana.mag@gmail.com

www.issuu.com/kaanana

**ಮುಖಪುಟ**

ಮರಹಣಬೆ

BANNERUGHATTA WILDLIFE CONSERVATION GROUP





ಸಂಪಾದಕೀಯ





ಪಟ್ಟೆಹುಲಿ ಚಿಟ್ಟೆ





ಹಸಿರು ಪುಕ್ಕ





ಸಸ್ಯಗಳು ಅಪಾಯವನ್ನು ಕೇಳಿಸಿಕೊಳ್ಳುತ್ತವೆ !





ಕಾನನ ಬಂಧ





ಒಂದು ದಿನ (ಕವನ)






ಪ್ರಕೃತಿ ಬಿಂಬ

# ಸಂಪಾದಕೀಯ

ಸೆಪ್ಟೆಂಬರ್ ೧೬ ವಿಶ್ವದಾದ್ಯಂತ **‘ಓಜೋನ್  ದಿನ’** ಎಂಬ ಹಲವರಲ್ಲಿ ಕೆಲವರಿಗೆ ಮಾತ್ರ ಹೊಳೆದೀತು. ಏನೇ ಆದರೂ ಇಡೀ ಪ್ರಪಂಚದಲ್ಲಿ ಅನೇಕ ದೇಶಗಳು ೧೯೮೭ ಮಾಂಟ್ರಿಲ್ ಒಪ್ಪಂದದ ಪ್ರಕಾರ ಚಿಕ್ಕ ಚೊಕ್ಕ ಹೆಜ್ಜೆಯನ್ನಾದರೂ ಇಡುತ್ತಿದ್ದಾರೆ.  ನಮ್ಮ ದೇಶದಲ್ಲಿ ಯಾವುದ್ದಕ್ಕೂ 'ಓ' ಗೊಡದೆ ಇದರ ಧ್ವಂಸ ನಿರಾಯಾಸವಾಗಿ ಸಾಗಿದೆ. ಓಜೋನ್ ಎಂಬುದೊಂದು ರಕ್ಷಾಕವಚ. ಕೇವಲ ಮೂರು ಆಮ್ಲಜನಕ ಅಣುಗಳ ಸಂಯೋಗದಿಂದ ರಚನೆಯಾಗಿ ಅತ್ಯಂತ ಸರಳ ರೂಪದಲ್ಲಿದ್ದು ಹಾನಿಕಾರಕ UV ಕಿರಣಗಳನ್ನು ತಡೆಯುತ್ತದೆ. ಭೂಮಿಯ ಜೀವಸಂಕುಲದ ಬದುಕಿಗೆ ಕಾರಣವೆಂದರೆ ತಪ್ಪಾಗಲಾರದು. ಇದರೊಟ್ಟಿಗೆ ಕ್ಲೋರೀನ್ ಅಣು ಸೇರಿದರೆ  'ಓ' ಖಾಲಿಯಾಗುತ್ತ ಅಲ್ಲಿ ತೂತು ಉಂಟಾಗುತ್ತದೆ.

ನಾವು ಭೂಮಿಯಲ್ಲಿ ಹಿಂದೆಂದೂ ಇತಿಹಾಸವಿರದ ಆಧುನೀಕರಣದ ಲೇಪ ಹಚ್ಚಿ ಮಾಡುವ ಅನೇಕ ಕೃತ್ಯಗಳಲ್ಲೊಂದು ಓಜೋನ್ ಪದರದ ಶಿಥೀಲೀಕರಣ. ಪ್ರಪಂಚದ ಮೊದಲ ಐದು ಮಾಲಿನ್ಯ ಸೂಸುವ ಪಟ್ಟಿಯಲ್ಲಿ ನಮ್ಮ ದೇಶವೂ ಇದೆ. ಅತ್ಯಂತ ಮಲಿನ ವಾಯು ವಾತಾವರಣ ಎಂಬ ಹೆಗ್ಗಳಿಕೆ ಬೇರೆ. ದಿನ ನಿತ್ಯದ ಮನುಷ್ಯನ ದೌರ್ಜನ್ಯಗಳಾದ ವಾಹನಗಳು,  ಔದ್ಯೋಗಿಕರಣ,  ಅಷ್ಟೇ ಏಕೆ ಮನೆಗಳಲ್ಲಿ ಉಪಯೋಗಿಸುವ ಫ್ರಿಜ್ ಗಳು , ದಿನನಿತ್ಯ ಉಪಯೋಗಿಸುವ ಏರೋಸಾಲ್ (ಸೆಂಟ್) ಪದಾರ್ಥಗಳು ಓಜೋನ್ ಪದರದ ನಿರ್ನಾಮಕ್ಕೆ ನಾಂದಿಹಾಡುತ್ತವೆ.

ಕಪ್ಪೆಗಳಂತ ಉಭಯವಾಸಿಗಳ ವರ್ತನೆಗಳು, ಅದರ ರೋಗ ನಿರೋಧಕ ಶಕ್ತಿ, ಅಂಗವಿಕಲತೆಗೆ ಕಾರಣವಾಗಿದೆ. ಅನೇಕ ಸಸ್ಯಗಳಲ್ಲಿ ಹೂಬಿಡುವ ಚಕ್ರ ಏರು ಪೇರಾಗುತ್ತದೆ. ಅನೇಕ ಜೀವಿಗಳಲ್ಲಿ ಚರ್ಮದ ಕ್ಯಾನ್ಸರ್, ಸಂತಾನೋತ್ಪತ್ತಿ ಶಕ್ತಿ ಕ್ಷೀಣವಾಗುವುದು ಇತರೆ ಪರಿಣಾಮಗಳು. ಮಾನವನ ಈ *'ತನ್ನ ಗುಂಡಿ ತಾನೇ ತೊಡುವ'* ಕ್ರಿಯೆಯಲ್ಲಿ ಅಮಾಯಾಕ ಜೀವಜಂತುಗಳು *'ಎತ್ತು ತಪ್ಪುಮಾಡಿದರೆ ಎಮ್ಮೆಗೆ ಬರೆ'* ಎಂಬ ನಾಣ್ಣುಡಿಯಂತೆ ನಲುಗಿ ಹೋಗಿವೆ. ಪ್ರತಿಯೊಬ್ಬರ ಧೃಡಪ್ರಯತ್ನದಿಂದ,  ಪ್ರಜ್ಞಾಪೂರ್ವಕ  ಜೀವನ ದಿಂದ ಮಾತ್ರ ಓಜೋನ್ ರಕ್ಷಣೆ ಸಾಧ್ಯ!.



**ಅರಣ್ಯ, ವನ್ಯಜೀವಿ, ಪರಿಸರ ಸಂರಕ್ಷಣೆ, ವಿಜ್ಞಾನ, ವನ್ಯಜೀವಿ ಛಾಯಾಚಿತ್ರ, ಕವನ, ಕಥೆಗಳು ಹಾಗೂ ಲೇಖನಗಳನ್ನು  ತಾವೂ ಕಾನನಕ್ಕೆ ಬರೆಯಬಹುದು.**

**ಇ-ಅಂಚೆ :** kaanana.mag@gmail.com

Wildlife Conservation Group



# ಚಿಟ್ಟೆ ಗುರುತು

## * ಪಟ್ಟೆ ಹುಲಿ

ವೈಜ್ಞಾನಿಕ ಹೆಸರು : *Danaus genatia*
ಸಾಮಾನ್ಯ ಹೆಸರು : Stiped Tiger

"ಮಾಲಂಗಿ ಮಡುವಾಗಿ, ತಲಕಾಡು ಮರಳಾಗಿ, ಮೈಸೂರು ಮಹಾರಾಜರಿಗೆ ಮಕ್ಕಳಾಗದಿರಲಿ" ಎಂದು ಅಲಮೇಲಮ್ಮನು ಶಾಪ ನೀಡಿದ್ದರಿಂದಲೇ ತಲಕಾಡು ಮರಳಾಗಿದೆ ಎಂಬ ನಂಬಿಕೆ, ಈಗಲೂ ಎಲ್ಲರ ಮನದಲ್ಲಿ ತಲ್ಲಣಿಸುತ್ತಿದೆ. ಈ ನಂಬಿಕೆಗಳಿಗೆ ಸತ್ಯವನ್ನು ಮರೆಮಾಚುವ ಸಾಮರ್ಥ್ಯವಿದೆ ಎಂಬುದು ಈ ಹೇಳಿಕೆಯಿಂದ ತಿಳಿದರೂ ತರ್ಕಗಳು ಬೇರೆಯೇ ದಾರಿ ತೋರುತ್ತವೆ.




ಅದು ಏನೇ ಇರಲಿ ತಲಕಾಡಿಗೆ ಭೇಟಿ ನೀಡಿದರೆ ಯಾವುದೋ ಮರುಭೂಮಿಗೆ ಹೋದ ಅನುಭವವಾಗುವುದಂತೂ ಖಂಡಿತ. ಆದರೆ ವೈಜ್ಞಾನಿಕವಾಗಿ ನದಿಯ ಸ್ಥಾನಪಲ್ಲಟದಿಂದ ಈ ಮರಳು ಬಂದಿರಬಹುದೆಂದು ವಿಜ್ಞಾನಿಗಳ ಅನಿಸಿಕೆ. ಏನೇ ಇರಲಿ ಮೊನ್ನೆ ವಾರಾಂತ್ಯದಲ್ಲಿ ಮೈಸೂರು, ತಲಕಾಡು, ಸಂಗಮ ಎಲ್ಲವನ್ನೂ ಒಮ್ಮೆ ಸುತ್ತಿ ಬರಲೆಂದು ಹೋಗಿದ್ದಾಗ ಮರಳುಗಾಡಿನಲ್ಲಿ ನೀರು ಸಿಕ್ಕಂತೆ ತಲಕಾಡಿನಲ್ಲಿ ಅಲೆದಾಡುತ್ತಿದ್ದ ನಮಗೆ ಕಿತ್ತಳೆ ಬಣ್ಣದ ಒಂದು ಚಿಟ್ಟೆ ಕಣ್ಣಿಗೆ ಬಿತ್ತು. ಗಮನಿಸಿ ನೋಡಿದಾಗ ಅದು "ಪಟ್ಟೆಹುಲಿ" (Striped Tiger). ಸಾಮಾನ್ಯವಾಗಿ ಕಾಣಸಿಗುವ ಈ ಚಿಟ್ಟೆಗಳನ್ನು ಸಮತಟ್ಟು ಪ್ರದೇಶ, ಕುರುಚಲು, ನಿತ್ಯಹರಿದ್ವರ್ಣ ಕಾಡುಗಳಲ್ಲಿ ನೋಡಬಹುದು.

ವಯಸ್ಕ ಚಿಟ್ಟೆಯು ಸುಂದರವಾಗಿದ್ದು, ರೆಕ್ಕೆಯ ಅಂಚುಗಳಲ್ಲಿ ಸಣ್ಣ ಸಣ್ಣ ಬಿಳಿ ಚುಕ್ಕೆಗಳಿದ್ದು, ಅವು ಕಪ್ಪು ಬಣ್ಣದಿಂದ ಆವೃತವಾಗಿರುತ್ತವೆ. ರೆಕ್ಕೆಯ ಕೆಳಭಾಗವು ನೋಡಲು ಒಂದೇ ತರ ಇದ್ದು ಸ್ವಲ್ಪ ತಿಳಿ ಬಣ್ಣದಲ್ಲಿರುತ್ತದೆ. ವಿಶೇಷವೆಂದರೆ ಈ ಚಿಟ್ಟೆಗಳು 2500ಮೀ ಎತ್ತರದ ಬೆಟ್ಟಗಳಲ್ಲೂ ಕಾಣಸಿಗುತ್ತವೆ. ಹಾಗೂ ಬೇರೆ ಚಿಟ್ಟೆಗಳೊಂದಿಗೆ ಸೇರಿ ವಲಸೆ ಹೋಗುತ್ತವೆ.



- ಮಹದೇವ .ಕೆ.ಸಿ



# ಹಕ್ಕಿಲೋಕ

## * ಹಸಿರು ಪುಕ್ಕ

ಸಾಮಾನ್ಯ ಹೆಸರು : **White-cheeked Barbet**

ವೈಜ್ಞಾನಿಕಾ ಹೆಸರು : ***Megalaima viridis***




ನಾವು ಚಿಟ್ಟೆಗಳ ಬಗ್ಗೆ ತುಂಬ ರಿಸರ್ಚ್‌ಗಳನ್ನು ಮಾಡಿರುವುದನ್ನು ನೋಡಿದ್ದೇವೆ ಕಂಡಿದ್ದೇವೆ. ತುಂಬ ಜನ ಇದರ ಬಗ್ಗೆ ಆಳವಾದ ಅಧ್ಯಯನ ಮಾಡಿದ್ದಾರೆ ಮಾಡುತ್ತಿದ್ದಾರೆ. ಆದರೆ ಈ ಪತಂಗಗಳ ಬಗ್ಗೆ ಅಧ್ಯಯನ ಮಾಡುವುದನ್ನು ನಾವು ಎಲ್ಲೂ ನೋಡಿಲ್ಲ ಬಿಡಿ. ಇವುಗಳ ಬಗ್ಗೆ ರಿಸರ್ಚ್ ಗಳು ನಡೆಯುತ್ತಿದ್ದರೂ ತುಂಬ ಅಪರೂಪ. ಒಂದು ಸಾರಿ ತಮಿಳುನಾಡಿನ ಕೋಯಂಬತ್ತೂರಿನಲ್ಲಿ ನಡೆದ ಒಂದು ಸೆಮಿನಾರ್ ನಮ್ಮನ್ನು ಪತಂಗಗಳ ಜೀವನದ ಬಗ್ಗೆ ಆಸಕ್ತಿ ಹುಟ್ಟಿಸಿತು.

ಅದೊಂದು ಮಳೆಗಾಲದ ದಿನ, ಗೆಳೆಯ ಶಂಕರನು “ಕೋಯಂಬತ್ತೂರಿನ ಕಾರ್ಯಾಗಾರದಲ್ಲಿ ಮಾಡಿದ ಹಾಗೆ ಇವತ್ತು ರಾತ್ರಿ ಪತಂಗಗಳಿಗೆ ಟ್ರಾಪ್ ಹಾಕೋಣಾ” ಎಂದ. ಪತಂಗಗಳ ಟ್ರಾಪ್ ನಿಮಗೆ ಗೊತ್ತಿದಿಯೋ ಇಲ್ಲವೋ ನನಗೆ ಗೊತ್ತಿಲ್ಲ!. ಟ್ರಾಪ್ ಅಂದ್ರೆ ಈ ಪತಂಗಗಳನ್ನು ಹಿಡಿಲು ಬಲೆಯೊಡ್ಡುವ ತಂತ್ರ, ಹೇಗೆ ಎಂದರೆ ರಾತ್ರಿಯ ವೇಳೆಯಲ್ಲಿ ಹುಲ್ಲುಗಾವಲು ಅಥವಾ ಕಾಡಿನ ಪಕ್ಕದಲ್ಲಿ ಒಂದು ಬಿಳಿಯ ಪರದೆಯನ್ನು ಅಗಲವಾಗಿ ಎರಡು ಮರಗಳಿಗೆ ಬಿಗಿಯಾಗಿ ಕಟ್ಟಿ. ಬಿಳಿಯ ಪರದೆಯಮೇಲೆ ಟ್ಯೂಬ್ ಲೈಟ್/ಅಲ್ಟ್ರಾವೈಲಟ್ ಬೀಳುವಂತೆ ಮಾಡಿದರೆ ಮುಗಿಯಿತು. ಕಾಡು ಹುಲ್ಲುಗಾವಲು ಎಲ್ಲಿಲ್ಲದ ಎಲ್ಲಾ ಪತಂಗಗಳು ಬೆಳಕಿನ ಕಡೆಗೆ ಬಂದು ಪರದೆಯ ಮೇಲೆ ಕೂರುತ್ತವೆ.

ವಿಜ್ಞಾನಿಗಳು ಈ ಪರದೆಯ ಮೇಲೆ ಕುಳಿತ ಬಣ್ಣ ಬಣ್ಣದ ಪತಂಗಗಳನ್ನು ಅಭ್ಯಾಸಿಸಿ ದೊಡ್ಡ ದೊಡ್ಡ ಅಧ್ಯಯನದಲ್ಲಿ ತೊಡಗಿರುತ್ತಾರೆ. ಕೆಲ ಫೋಟೋಗ್ರಾಫರ್ ಗಳು ಒಳ್ಳೆಯ ಸುಂದರ ಪತಂಗಗಳ ಛಾಯಾಚಿತ್ರ ತೆಗೆಯುತ್ತಾರೆ. ನಾವು ಬರಿ ಅವುಗಳ ಸೊಬಗನ್ನು ನೋಡಲೆಂದೇ ರಾತ್ರಿ ಪತಂಗಗಳ ಟ್ರಾಪ್ ಹಾಕುವುದೆಂದು ಉಪಾಯ ಹೂಡಿದೆವು. ನಮ್ಮ ಬಳಿ ಬಿಳಿಯ ಪರದೆ ಇರಲಿಲ್ಲ ಪರದೆಯ ಮೇಲೆ ಬೆಳಕು ಬೀಳಿಸಲು ಯಾವುದೇ ಬೆಳಕು ಇರಲಿಲ್ಲ. ಈಗ ಏನು ಮಾಡುವುದು ಎಂದು ಇಬ್ಬರು ಯೋಚಿಸುತ್ತ ಕುಳಿತಿರಬೇಕಾದರೆ ಗೆಳೆಯ ಶಂಕರನಿಗೆ ನಮ್ಮ ಸ್ಕೂಲ್ ಹೆಡ್ ಮಾಸ್ಟರ್ ದಿನಾ ಪಂಚೆ ಉಡುತ್ತಿದ್ದದ್ದು ನೆನಪಿಗೆ ಬಂದು ಹೇಗಾದರು ಮಾಡಿ ತರುತ್ತೇನೆಂದು ಹೇಳಿದ.




ನಾನು, ನಮ್ಮ ತೋಟದ ಮನೆಗೆ ಹೋಗಿ ಅಪ್ಪ ಇಟ್ಟಿದ್ದ ಕರೆಂಟ್ ವೈರ್, ಹೊಲ್ಡರ್, ಬಲ್ಬ್ ಎಲ್ಲವನ್ನು ತಂದೆ. ಶಂಕರನು ಹೇಗೋ ಮಾಡಿ ಪಂಚೆಯನ್ನು ಅಣಸಿ ತಂದಿದ್ದ. ನಮ್ಮ ಮನೆಯಿಂದ ಅರ್ಧ ಕಿಲೋಮೀಟರ್ ದೂರದಲ್ಲಿ ಕಾಡಿನ ಪಕ್ಕ ಒಂದು ಆಲದ ಮರದ ಬುಡದಲ್ಲಿ ಪಂಚೆಯನ್ನು ಎರಡು ಕೊಂಬೆಗಳಿಗೆ ಕಟ್ಟಿ ಪಕ್ಕದಲ್ಲೇ ಹಾದು ಹೋಗುವ ಕರೆಂಟ್ ತಂತಿಗಳಿಂದ ಕರೆಂಟ್ ತೆಗೆದು ಕೊಂಡು ಪಂಚೆಯ ಮೇಲೆ ಬೆಳಕು ಬೀಳುವಂತೆ ಮಾಡಿದೆವು.

ರಾತ್ರಿ ಊಟ ಮುಗಿಸಿಬಂದು, ಪರದೆಗೆ ಬಿಟ್ಟಿದ್ದ ಲೈಟಿನ ಬಳಿ ಕುಳಿತು ಯಾವುದೋ ಪುಸ್ತಕದ ಹಾಳೆಗಳನ್ನು ತಿರುವಿಹಾಕುತ್ತಾ, ಕಥೆಯನ್ನು ಓದುತ್ತಾ ಕುಳಿತಿದ್ದು, ಆ ಕಗ್ಗತ್ತಿಲಿನ ಭಯಕ್ಕೆ ಹೆದರದೆ, ನಾನು ಶಂಕರನನ್ನು ನಂಬಿಕೊಂಡು! ಶಂಕರನು ನನ್ನನ್ನು ನಂಬಿಕೊಂಡು ಮಂಡು ಧೈರ್ಯದಲ್ಲಿ ಆ ಅಮವಾಸೆಯ ಕತ್ತಲಲ್ಲಿ ಪತಂಗಗಳ ಬೇಟೆಗೆ ಕುಳಿತೆವು. ರಾತ್ರಿ ಹನ್ನೊಂದು ಆದರೂ ಒಂದೆರಡು ಸಣ್ಣ ಪತಂಗಗಳನ್ನು ಬಿಟ್ಟರೆ ಯಾವ ಪತಂಗಗಳು ಬರಲೇ ಇಲ್ಲಾ. ಕಾದು ಸಾಕಾಯಿತು, ಸುಸ್ತಾಯಿತು, ಬೇಜಾರಾಯಿತು. “ನಡಿ ಸಾಕು, ಮನೆಗೆ ಹೋಗಿ ಮಲಗೋಣ”. ಎಂದು ಮನಸ್ಸು ಹೇಳಿದರೂ ಇನ್ನೂಸ್ವಲ್ಪ ಸಮಯ ನೋಡೋಣ ಎನಿಸುತ್ತಿತ್ತು. ಆದರೆ ಇಬ್ಬರ ಮನಸ್ಸುಗಳು ಒಂದೇ ರೀತಿ “ನಡೀ ಸಾಕು, ಹೋಗಿ ಮಲಗೋಣ” ಎಂದು ಹೇಳುತ್ತಿದ್ದುದ್ದರಿಂದ ಇಬ್ಬರು ಒಂದೇ ಬಾರಿ “ನಡೀ ಸಾಕು ಹೋಗೋಣ” ಎಂದು ಹೇಳಿದೆವು. ಮಧ್ಯ ರಾತ್ರಿ ಒಂದು ಬಾರಿ ಬಂದು ನೋಡಿದರಾಯಿತು. ಈಗ ಹೋಗೋಣ ಎಂದ ಶಂಕರ. ಎದ್ದು ಸೀದ ಮನೆಯ ಕಡೆ ಬಂದು ಗಡಿಯಾರಕ್ಕೆ ಅಲ್ರಾಂ ಇಟ್ಟು ಮಲಗಿದೆವು. ಎಚ್ಚರಿಕೆ ಇಲ್ಲದ ನಿದ್ದೆ, ಮಧ್ಯರಾತ್ರಿ ಗಡಿಯಾರ ಬಾಯಿಬಡಿದುಕೊಂಡು ಎಬ್ಬರಿಸಿತು. ಇಬ್ಬರು ಬೆಚ್ಚಿಬಿದ್ದು ಎದ್ದೆವು. ಶಂಕರ ನಡಿ ಹೋಗೋಣ ಎಂದ ತಲೆಯಾಡಿಸುತ್ತಾ ರಗ್ಗನ್ನು ಮೈಗೆ ಸುತ್ತಿಕೊಂಡು ಗೆಳೆಯನನ್ನು ಹಿಂಬಾಲಿಸಿದೆ. ಗೆಳೆಯ ಸಣ್ಣದೊಂದು ಸೀಮೆ ಎಣ್ಣೆ ಬುಡ್ಡಿಯಂತಹ ಸಣ್ಣದೊಂದು ಟಾರ್ಚನ್ನು ಮಿಣ್ಕಾ... ಮಿಣ್ಕಾ... ಎಂಬ ಬೆಳಕಿನಲ್ಲಿ ಬೆಟ್ಟ ಏರಿ ಆಲದಮರ ತಲುಪಿದ್ದು ಕಪ್ಪು ಕತ್ತಲಲ್ಲಿ ತಿಳಿಯಲೇ ಇಲ್ಲ.

ಬೆಳಕಿನ ಪಂಚೆಯ ಮೇಲೆ ಸಣ್ಣಪುಟ್ಟ ಒಂದಷ್ಟು ಪತಂಗಗಳು, ಒಂದೆರಡು ಸ್ವಲ್ಪ ದೊಡವೂ ಕುಳಿತಿದ್ದವು. “ಇದು ಯಾವುದು?, ಇದು ನೋಡೋ ಶಂಕರ ಚಿನ್ನದ್ ತರಾ ಕಣ್ತಾದೆ?, ಏ. . . ಅಷ್ಟ್ ದೊಡ್ಡವು ಯಾವು ಬರ್ಲಿಲ್ಲ ಮಾರಾಯ”. ಎಂದು ಮಾತನಾಡುತ್ತಾ ಇಬ್ಬರೂ ಪರದೆಯ ಮುಂದೆ ನಿಂತು ಪತಂಗಗಳ ವಿಸ್ಮಯ ಲೋಕದಲ್ಲಿ ಮುಳುಗಿ ಹೋಗಿದ್ದೆವು.



ಪರದೆಯ ಹಿಂದೆ ಆಲದಮರದಿಂದ ಯಾವುದೋ ಭೂತವೋ! ಪಿಶಾಚಿಯೋ! ಪರ್...... ಎನ್ನುತ್ತಾ ಜೋರಾಗಿ ಪಂಚೆಗೆ ಬಡಿದು, ಆ ಪಂಚೆ ನಮ್ಮಿಬ್ಬರ ಮುಖಕ್ಕೆ ಬಡಿದು, ಪಂಚೆಯ ಮೇಲೆ ಕುಳಿತ್ತಿದ್ದ ಪತಂಗ, ಹುಳ-ಹುಪ್ಪಟ್ಟೆಗಳೆಲ್ಲ ಮೈಮೇಲೆ ಬಿದ್ದು, ಆಲದಮರದ ಪಿಶಾಚಿಯ ಭಯಕ್ಕೆ ಹೆದರಿ, ತಿರುಗಿ ನೋಡದೇ ಓಡಿ ಹೋಗಣ ಎಂದು ಸಿದ್ದರಾಗಿದ್ದೆವು. ಅಷ್ಟರಲ್ಲಿ ಮತ್ತೆ ಮತ್ತೆ ಪಂಚೆಗೆ ಬಡಿದುಕೊಂಡು ಮುನ್ನುಗ್ಗಲಾಗದೆ ಸುಸ್ತಾಗಿ ದಾರಿ ಬದಲಿಸಿ ಪಂಚೆಯ ಪಕ್ಕದಲ್ಲೇ ಹಾರಿ ನಮ್ಮಿಬ್ಬರ ನಡುವೆಯೇ ಹಸಿರು ಹಕ್ಕಿಯೊಂದು ಹಾರಿಹೋಯಿತು.

ಈ ಹಕ್ಕಿ ಸಾಮಾನ್ಯವಾಗಿ ಮರದ ಪೊಟರೆಗಳಲ್ಲಿ ಬಿಲ ಕೊರೆದು ಗೂಡು ಮಾಡಿಕೊಂಡಿರುತ್ತದೆ ಎಂಬ ನೆನೆಪು ಬಂದು ಪಂಚೆಯ ಹಿಂದೆ ಹೋಗಿ ಆಲದಮರದ ಪೊಟರೆಯನ್ನು ನೋಡಿದಾಗ ಕಂಡಿತೀ ಕುಟ್ರು ಹಕ್ಕಿಯ ಗೂಡು. ಈ ಹಕ್ಕಿಯನ್ನು ಇಂಗ್ಲೀಷ್ ನಲ್ಲಿ 'ವೈಟ್-ಚೀಕ್ಡ್ ಬಾರ್ಬೆಟ್' ಎಂದು ಕರೆಯುವುದುಂಟು. ನೋಡಲು ಗೊರವಂಕ ಗಾತ್ರದ ಮಾಸಲು ಮಾಸಲು ಹಸಿರುಹಕ್ಕಿ. ತಲೆ, ಕತ್ತು ತಿಳಿ ಕಂದು ಬಣ್ಣವಿದ್ದು. ಕತ್ತು, ಎದೆಯ ಮೇಲೆ ಬಿಳಿಯ ಗೆರೆಗಳಿರುತ್ತವೆ. ಕೆನ್ನೆ ಮತ್ತು ಗದ್ದ ಬಿಳಿಯ ಬಣ್ಣದ್ದು. ಕೊಕ್ಕು  ಕೇಸರಿ ಬಣ್ಣದ, ಕೊಕ್ಕಿನ ಸುತ್ತಾ ಮೀಸೆಗಳಿರುತ್ತವೆ.ಪಚ್ಚೆ ಹಸಿರಿನ ರೆಕ್ಕೆ ಹಾಗೂ ಮೋಟು ಬಾಲವಿರುವ ಹಕ್ಕಿ.

ಹಕ್ಕಿಯ ಇಷ್ಟೆಲ್ಲಾ ಲಕ್ಷಣಗಳನ್ನು ಕತ್ತಲಲ್ಲಿ ಕಂಡುಹಿಡಿಯಲು ಆಗದಿದ್ದರು ಅದರ ಬಣ್ಣ, ಪೊಟರೆಯಲ್ಲಿದ್ದ ಗೂಡನ್ನು ನೋಡಿದರೆ ತಿಳಿಯುತ್ತದೆ. ಈ ಹಕ್ಕಿ ಕುಟ್ರು ಹಕ್ಕಿಯೇ ಎಂದು. ಆದರೂ ನಮಗೆ ಇನ್ನೊಂದು ನಂಬುವಂತಹ ಸಾಕ್ಷಿ ಸಿಕ್ಕಿದ್ದು ಪಂಚೆಗೆ ಬಡಿದುಕೊಂಡಾಗ ಉದುರಿ ಬಿದ್ದಿದ್ದ ಮಿರುಗುವ ಹಸಿರು ಪುಕ್ಕ.




- ಅಶ್ವಥ ಕೆ.ಎನ್

# ವಿ ವಿ ಅಂಕಣ

## * ಸಸ್ಯಗಳು ಅಪಾಯವನ್ನು ಕೇಳಿಸಿಕೊಳ್ಳುತ್ತವೆ!

ಸಂಗೀತವನ್ನು ಕೇಳಿಸಿಕೊಳ್ಳುವ ಸಸ್ಯಗಳು ದೊಡ್ಡ ದೊಡ್ಡ ಕುಂಬಳಕಾಯಿ ಬಿಡುತ್ತವೆ, ಫಸಲು ಹೆಚ್ಚಾಗುತ್ತದೆ ಎಂದು ಹೇಳಲು ಕಷ್ಟ.  ಆದರೆ ಸಸ್ಯಗಳು ತಮ್ಮ ಶತೃಗಳ ಬರುವಿಕೆಯನ್ನು ಕೇಳಿಸಿಕೊಳ್ಳಬಲ್ಲವು ಎಂದು ವಿಜ್ಞಾನಿಗಳು ಈಗ ಕಂಡುಹಿಡಿದಿದ್ದಾರೆ. ಹಸಿರು ಎಲೆಗಳನ್ನು ಖರುಮ-ಕರುಮ ಎಂದು ತಿನ್ನುವ ಶಬ್ಧವನ್ನು ಕೇಳಿಸಿಕೊಳ್ಳುವ ಸಸ್ಯಗಳು ಕೆಮಿಕಲ್ ವಾರ್ನಿಂಗ್ ಕೊಟ್ಟು ಸೈನ್ಯ ಸಿದ್ದಮಾಡಿಕೊಳ್ಳುತ್ತವೆ. ಮಿಸ್ಸೂರಿ ಯುನಿವರ್ಸಿಟಿಯ *'ಹೈಡಿ ಅಸೆಲ್'* ಹಾಗೂ ಅವರ ತಂಡ ಸಾಸಿವೆಯ ಸಣ್ಣಗಿಡಗಳನ್ನು ಹಾಗೂ ಕ್ಯಾಟರ್ ಪಿಲ್ಲರ್‌ಗಳ ಮೇಲೆ ನಡೆಸಿದ ಪ್ರಯೋಗದಲ್ಲಿ ಸಸ್ಯಗಳು ಕೇಳಿಸಿಕೊಳ್ಳುತ್ತವೆ ಎಂದು ಕಂಡು ಹಿಡಿದಿದ್ದಾರೆ.

ವಿಜ್ಞಾನಿಗಳು ಒಂದು ಸಾಸಿವೆ ಗಿಡವನ್ನು ತೆಗೆದುಕೊಂಡು ಅದರ ಎಲೆಗೆ ಪ್ಲಾಸ್ಟಿಕ್  ಟೇಪನ್ನು ಮೆತ್ತಿದ್ದಾರೆ. ಆ ಪ್ರತಿಫಲಕ ಟೇಪಿಗೆ ಒಂದು ಲೇಸರ್ ಕಿರಣವನ್ನು ಬಿಟ್ಟು. ಅದೇ ಎಲೆಗೆ ಒಂದು ಎಲೆ ಬಕ್ಷಕ ಕ್ಯಾಟರ್ಪಿಲ್ಲರ್ ನ್ನು ಬಿಟ್ಟು, ಆ ಹುಳು ಎಲೆಯನ್ನು ತಿನ್ನುವಾಗ ಸ್ವಲ್ಪವೇ ಅಲುಗಾಡಿದರೂ ಎಲೆ ಮೇಲೇರುವ ಪ್ರತಿಫಲಕ ಅಲುಗಾಡಿ ಲೇಸರ್ ಬೆಳಕು ಈ ಅತೀ ಸಣ್ಣ ಅಲುಗಾಟವನ್ನೂ ಕರಾರುವಕ್ಕಾಗಿ ಗುರುತಿಸಿದ್ದಾರೆ. ಹಾಗೂ ಆದರಿಂದ ಉಂಟಾಗುವ ಶಬ್ಧವನ್ನು ರೆಕಾರ್ಡ್ ಮಾಡಿದ್ದಾರೆ.




ಈ ಕ್ಯಾಟರ್ ಪಿಲ್ಲರ್ ತಿನ್ನಲು ಶುರುಮಾಡಿದರೆ ಕೆಲವೇ ಗಂಟೆಗಳಲ್ಲಿ ಗಿಡದ ಉಳಿದ ಎಲೆಗಳಲ್ಲಿ ಹುಳಕ್ಕೆ ಅಸಹ್ಯವಾಗುವಂತೆ ರಾಸಾಯನಿಕವನ್ನು ಬಿಡುಗಡೆ ಮಾಡಿರುವುದನ್ನು ಕಂಡುಕೊಂಡ ವಿಜ್ಞಾನಿಗಳು. ಬೇರೊಂದು ಹೊಸಗಿಡಕ್ಕೆ ಒಮ್ಮೆ ಆ ರೆಕಾರ್ಡ್ ಮಾಡಿಸಿದ್ದನ್ನು ಕೇಳಿಸಿದಾಗ ಆ ಗಿಡದಲ್ಲೂ ಈ ಅಸಹ್ಯಕಾರಕ ರಾಸಾಯನಿಕ ಬಿಡುಗಡೆಯಾಗಿರುವುದು ಕಂಡು ಬಂದಿದೆ. ಇದರಿಂದ ಸಸ್ಯಗಳು ಕೇಳಿಸಿಕೊಳ್ಳುತ್ತವೆ ಎನ್ನುವ ಅಂಶಕ್ಕೆ ವೈಜ್ಞಾನಿಕವಾಗಿ ಸ್ಪಷ್ಟೀಕರಿಸಿದ್ದಾರೆ.

ಮುಂದೆ ಈ ತತ್ವವನ್ನು ಬಳಸಿಕೊಂಡು ಯಾವ ಕೀಟ ಹೇಗೆ ಹೇಗೆ ಶಬ್ಧ ಮಾಡುತ್ತೆ ಹಾಗೇ ರೆಕಾರ್ಡ್ ಮಾಡಿಕೊಂಡು ಜೋರಾಗಿ ಮೈಕಾಕಿ ಕೂಗಿ ತೋಟದಲ್ಲಿರುವ ಎಲ್ಲಾ ಗಿಡಗಳನ್ನು ಎಚ್ಚರಿಸಿ ಅವು ಅವುಗಳನ್ನು ಕಾಪಾಡಿಕೊಳ್ಳುವಂತೆ ಮಾಡಬಹುದು. "*ನಮಗೆ ಫಸಲು ಜಾಸ್ತಿಯಾಗುತ್ತೆ! ಪರಿಸರಸ್ನೇಹಿ ಕೂಡ!*" ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

- ಶಂಕರಪ್ಪ ಕೆ.ಪಿ

# ಕಾನನ ಬಂಧ




## ಎಡದಿಂದ ಬಲಕ್ಕೆ

1. ಜೀವಿಗಳ ಅಂತ್ಯವನ್ನು ಹೀಗೂ ಕರೆಯಬಹುದು (4)
2. ಸಮುದ್ರದ ನೀರಿನಲ್ಲಿ ಸೇರಿಕೊಂಡಿರುವ ಉಪ್ಪಿನ ಅಂಶ (4)
4. ಮೊಟ್ಟೆಯ ಒಳಭಾಗದ ಕವಚವನ್ನು ಹೀಗೂ ಕರೆಯುತ್ತಾರೆ (4)
5. ಕುಟುಂಬವು ವೃದ್ಧಿಯಾದಂತೆಲ್ಲ ಈ ರೂಪವನ್ನು ಹೊಂದುತ್ತದೆ(4)
7. ಚತುರ ಪ್ರಾಣಿ ನರಿಗೆ ಈ ಹೆಸರೂ ಇದೆ (4)
9. ನದಿಗುಂಟ ಸಾಗುವ ಈ ಪ್ರದೇಶ (4)
11. ಭೂಮಿಯನ್ನು ಆವರಿಸಿರುವ ಹಲವು ಪದರುಗಳಲ್ಲಿ ಇದು ಮುಖ್ಯವಾದದ್ದು (5)
12. ಈ ಭೂಮಿಯ ಮೇಲೆ ಜೀವಿಸುವ, ಚಲಿಸುವ ಜೀವಿಗಳು (4)
13. ನೀರಿನ ಮುಖ್ಯ ಸೆಲೆ (4)
14. ಇದು ಜನಿಸಿದ್ದು (2)

## ಮೇಲಿನಿಂದ ಕೆಳಕ್ಕೆ

1. ನಮ್ಮ ಪರಿಸರದಲ್ಲಿ ವಾಸಿಸುವ ಜೀವಿ ವೈವಿಧ್ಯ (4)
3. ಈ ಕೋಶದ ತುಂಬಾ ಶಕ್ತಿಯೇ ತುಂಬಿಕೊಂಡಿದೆ (4)
5. ಭೂಮಿಯ ಮೇಲೆ ವಾಸಿಸಿರುವ ಮಾನವನನ್ನು ಸೇರಿಸಿ ಎಲ್ಲಾ ಜೀವಿಗಳ ಜೀವನದ ಮುಖ್ಯ ಗುರಿಗಳಲ್ಲೊಂದು (5)
6. ಬಣ್ಣದ ಎಳೆ (4)
8. ಬೃಹದಾಕಾರದ ಈ ಯಂತ್ರದಿಂದ ವಿದ್ಯುತ್ತನ್ನು ಪಡೆಯಬಹುದು, ಆದರೆ ಇದು ವಾಯುಚಾಲಿತ (4)
9. ಸೂರ್ಯನೂ ಸಹ ಈ ಗುಂಪಿಗೆ ಸೇರಿದವನು (3)
10. ಈ ಹಕ್ಕಿ ಪರಿವಾರದ ಆಳದಲ್ಲಿದೆ (4)
13. ನೀರಿನಲ್ಲಿ ವಾಸಿಸುವ ಜೀವಿ (4)
14. ಜಲವ್ಯವಸ್ತೆಯ ಒಂದು ರೂಪ (5)
15. ಇದು ಕಾಡಿಗೆ ಸಂಬಂಧಿಸಿದ್ದು (2)

## ಕಾನನ ಬಂಧ ಆಗಸ್ಟ್ ಸಂಚಿಕೆಯ ಉತ್ತರಗಳು

### ಎಡದಿಂದ ಬಲಕ್ಕೆ

1. ವಿಶ್ವರೂಪ 2.ಪರಪುಟ್ಟ 4.ಮಧುರಕಂಠ 6.ನದಿಮೂಲ 9.ಪಳೆಯುಳಿಕೆ 10.ಭರತ 12.ಹಿಮಮಾನವ 14.ಸಸ್ತನಿ 16.ಕಾಜಾಣ 17.ರಜೋಗುಣ

### ಮೇಲಿನಿಂದ ಕೆಳಕ್ಕೆ

1.ಪರೋಪಜೀವಿ 3. ಪಶ್ಚಿಮಘಟ್ಟ 5.ಕಂಪನ 7.ಮೂಲಿಕೆ 8.ಯುಗಾಂತರ 9.ಪರಾಭವ 11.ಅಟಕಾಮ 12.ಹಿಮಾಲಯ 13.ಮಾನಸ ಸರೋವರ 15. ನಿಕಾರಗುವ

- ಸುಬ್ಬು ಬಾದಲ್



# ಒಂದು ದಿನ

ಕಾಣ ಬಲ್ಲೇನೆ ಒಂದು ದಿನ
ಬೆಟ್ಟ ಗುಡ್ಡಗಳ ಹಾದಿಯೊಳಗೆ
ಝುರಿ ತೊರೆಯ ಸಂಗಮ

ತೊರಬಲ್ಲೇನೆ ಒಂದು ದಿನ
ಬಳ್ಳಿ ಹೂಗಳ ತೋರಣ
ಹೂ ದುಂಬಿಗಳ ಸಂಮ್ಮಿಲನ

ಕೇಳ ಬಲ್ಲೇನೆ ಒಂದು ದಿನ
ಹಕ್ಕಿಗಳ ಹಾಡಿನ ಸರಿಗಮ
ಮೌನ ದನಿಗೆ ಮಿಡಿಯುವ ಮನವೀಣೆಯ

ಸವಿಯ ಬಲ್ಲೇನೇ ಒಂದು ದಿನ
ಜೇನ ಹನಿಯನೂ ಕಾಮನ ಬಿಲ್ಲನೂ
ಅಲೆಯ ಮತ್ತನೂ  ಅದರ ದನಿಯನೂ

ಹಾರ ಬಲ್ಲೇನೇ ಒಂದು ದಿನ
ಖಗದೆತ್ತರಕ್ಕೆ, ಶಿಖರದೆತ್ತರಕ್ಕೆ
ಮೇಘದೆತ್ತರಕೆ, ಬಾನಾಡಿಗಳ ಸಾಲೊಳಗೆ

ಸೇರ ಬಲ್ಲೇನೇ ಒಂದು ದಿನ
ಕಾನನದ ಕಣಿವೆಯೊಳಗೆ
ವಿಸ್ಮಯದ ವಿಚಾರದೊಳಗೆ.

- ಕೃಷ್ಣನಾಯಕ್


ಪ್ರಕೃತಿ ಬಿಂಬ